MAY 24, 2025

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- ಆಲಮಟ್ಟಿ ಜಲಾಶಯ; ರಾಜ್ಯ ಸರ್ಕಾರದಿಂದ, ರಾಷ್ಟ್ರೀಯ ಯೋಜನೆಯಾಗಿ, ಘೋಷಿಸುವ ಆಶಯ.
- ರಾಜ್ಯ ಇಂಧನ ಇಲಾಖೆಯ, ಹಣಕಾಸು ಸ್ಥಿತಿ ಸುಧಾರಣೆಗೆ, ಕ್ರಮ ಕೈಗೊಳ್ಳುವಂತೆ, – ಮನೋಹರ್‌ಲಾಲ್ ಖಟ್ಟರ್, ಸೂಚನೆ.
- ಸಮುದಾಯ ಬೀಜ ಬ್ಯಾಂಕ್; ರೈತರು ಹೆಸರು ನೊಂದಾಯಿಸಲು, ಈ ತಿಂಗಳ 31ರ ವರೆಗೆ, ಅವಕಾಶ.
- ಇಂಜಿನಿಯರಿಂಗ್ ಸೇರಿ, ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ; ಸಿ.ಇ.ಟಿ. ಫಲಿತಾಂಶ, ಇಂದು ಪ್ರಕಟ.

<><><>

ಈಗ ವಾರ್ತೆಗಳ ವಿವರ

<><><>

ವಿಜಯಪುರ ಜಿಲ್ಲೆ, ಆಲಮಟ್ಟಿಯ ಶ್ರೀ ಲಾಲಬಹಾದ್ದೂರ ಶಾಸ್ತ್ರಿ ಜಲಾಶಯದ ಎತ್ತರವನ್ನು, 519 ದಶಾಂಶ 6–0 ಮೀಟರ್‌ನಿಂದ, 524 ದಶಾಂಶ 2–5–6 ಮೀಟರ್ ಎತ್ತರಕ್ಕೆ ಏರಿಸಲು ಸರ್ಕಾರ ಬದ್ಧವಾಗಿದೆ; ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು, ಉಪ ಮುಖ್ಯಮಂತ್ರಿ ಹಾಗೂ ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ವಿಜಯಪುರ ಜಿಲ್ಲೆ, ಕೊರ್ತಿ–ಕೊಲ್ಹಾರದಲ್ಲಿ, ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ, ಅವರು ಮಾತನಾಡಿದರು. ಆಲಮಟ್ಟಿ ಜಲಾಶಯವನ್ನು, ರಾಷ್ಟ್ರೀಯ ಯೋಜನೆ ಎಂದು ಘೋಷಿಸುವ ಆಶಯ, ಸರ್ಕಾರ ಹೊಂದಿದೆ. ಕೃ ್ಣ ನದಿ ಪಾತ್ರದ ಎಲ್ಲ ಯೋಜನೆಗಳನ್ನು, ಕಾಲಮಿತಿಯಲ್ಲಿ ಪೂರ್ಣಗೊಳಿಸಲು, ಸರ್ಕಾರ ಯೋಜಿತವಾಗಿ, ಕೆಲಸ ಮಾಡುತ್ತಿದೆ, ಎಂದರು.

<><><>

ಕೇಂದ್ರ ಸರ್ಕಾರದ ಮಾರ್ಗದರ್ಶನದಲ್ಲಿ, ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿ, ಜಾರಿ ನಿರ್ದೇಶನಾಲಯ, ಕಾರ್ಯಾಚರಣೆ ನಡೆಸುತ್ತಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣಪ್ರಕಾಶ ಪಾಟೀಲ, ಆರೋಪಿಸಿದ್ದಾರೆ. ಗದಗನಲ್ಲಿ ಮಾತನಾಡಿದ ಅವರು, ಕೆ.ಎಚ್. ಪಾಟೀಲ ಅವರು, ರಾಜ್ಯ ರಾಜಕಾರಣದ ಧೀಮಂತ ನಾಯಕರು. ಅವರ ಕೊಡುಗೆ ಅಪಾರ. ಅವರ ಹೆಸರನ್ನು ಜಿಲ್ಲಾ ಆಸ್ಪತ್ರೆಗೆ ಇಡುವುದು ಸೂಕ್ತ. ಪಂಡಿತ ಪುಟ್ಟರಾಜ ಗವಾಯಿಗಳ ಹೆಸರನ್ನು, ಇನ್ನೊಂದು ಪ್ರಮುಖ ಸಂಸ್ಥೆಗೆ ನಾಮಕರಣ ಮಾಡುವ, ಚಿಂತನೆ ನಡೆದಿದೆ, ಎಂದರು. ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ,

ತಮಿಳುನಾಡು 73 ವೈದ್ಯಕೀಯ ಕಾಲೇಜ್‌ಗಳನ್ನು ಹೊಂದಿ, ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ಕರ್ನಾಟಕ 71 ಕಾಲೇಜ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ ಎಂದರು.

<><><>

ರಾಜ್ಯ ಇಂಧನ ಇಲಾಖೆಯಲ್ಲಿ, ವಾರ್ಷಿಕ ಹಣಕಾಸು ನಷ್ಟದ ಪ್ರಮಾಣ ಹೆಚ್ಚುತ್ತಿದ್ದು, ಪರಿಣಾಮಕಾರಿ ಸುಧಾರಣಾ ಕ್ರಮ ಜಾರಿಗೊಳಿಸುವಂತೆ, ಕೇಂದ್ರ ವಿದ್ಯುತ್ ಖಾತೆ ಸಚಿವ ಮನೋಹರ್‌ಲಾಲ್ ಖಟ್ಟರ್ ಸೂಚಿಸಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿಸಿದ್ದ, ರಾಜ್ಯ ವಿದ್ಯುತ್ ವಲಯದ, ಪ್ರಗತಿ ಪರಿಶೀಲನಾ ಸಭೆಯಲ್ಲಿ, ಅವರು ಮಾತನಾಡಿದರು. ಸರ್ಕಾರಿ ಸಂಸ್ಥೆಗಳು, ಸ್ಥಳೀಯ ಆಡಳಿತ ಸಂಸ್ಥೆಗಳು, ಸರ್ಕಾರಿ ವಸತಿ ಸಮುಚ್ಚಯಗಳಿಗೆ, ಈ ವರ್ಷದ ಆಗಸ್ಟ್ ತಿಂಗಳೊಳಗೆ, ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಬೇಕು. ವಿದ್ಯುತ್ ಶುಲ್ಕ ಬಾಕಿ ಸಮರ್ಪಕ ನಿರ್ವಹಣೆಗಾಗಿ, ಕೇಂದ್ರೀಕೃತ ಪಾವತಿ ವ್ಯವಸ್ಥೆ ಜಾರಿಗೊಳಿಸಬೇಕು ಎಂದು, ಸಲಹೆ ನೀಡಿದರು. ಕೇಂದ್ರದ ವಿದ್ಯುತ್ ಖಾತೆ ರಾಜ್ಯ ಸಚಿವ, ಶ್ರೀಪಾದ್ ಯಸೋ ನಾಯ್ಕ್, ರಾಜ್ಯ ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ಹಾಗೂ ಹಿರಿಯ ಅಧಿಕಾರಿಗಳು, ಸಭೆಯಲ್ಲಿ ಭಾಗವಹಿಸಿದ್ದರು.

<><><>

ಜೇನು ಕೃಷಿ ಲಾಭದಾಯಕವಾಗಿದ್ದು, ರೈತರು ಗುಣಮಟ್ಟದ, ಅಧಿಕ ಇಳುವರಿ ಪಡೆಯಲು, ಪರ್ಯಾಯವಾಗಿ ಜೇನು ಕೃಷಿ ಕೈಗೊಳ್ಳುವಂತೆ, ಕೇಂದ್ರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ, ರಾಜ್ಯ ಖಾತೆ ಸಚಿವರಾದ, ಶೋಭಾ ಕರಂದ್ಲಾಜೆ, ರೈತರಿಗೆ ಸಲಹೆ ನೀಡಿದ್ದಾರೆ. ದಕ್ಷಿಣಕನ್ನಡ ಜಿಲ್ಲೆ, ಸುಳ್ಯದಲ್ಲಿ ಜೇನು ವ್ಯವಸಾಯಗಾರರ ಸಹಕಾರಿ ಸಂಘದ, ನೂತನ ಕಟ್ಟಡ ಉದ್ಘಾಟಿಸಿ ಹಾಗೂ ಜೇನು ಚಾಕೋಲೇಟ್ ಬಿಡುಗಡೆ ಗೊಳಿಸಿ, ಮಾತನಾಡಿದರು. ಔಷಧೀಯ ಗುಣವುಳ್ಳ ಜೇನು ಉತ್ಪನ್ನಗಳಿಗೆ, ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಇದೆ ಎಂದರು.

<><><>

ಇದೇ ಸಂದರ್ಭದಲ್ಲಿ ಸಚಿವರು, ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಆವರಣದ, ಜನ್ ಔಷಧಿ ಕೇಂದ್ರಗಳನ್ನು ಮುಚ್ಚುವ ಕುರಿತ, ಆದೇಶವನ್ನು ಮರು ಪರಿಶೀಲಿಸುವಂತೆ, ಮುಖ್ಯಮಂತ್ರಿಯವರನ್ನು ಒತ್ತಾಯಿಸಿದರು.

<><><>

ರಾಜ್ಯದ ಉತ್ತರಕನ್ನಡ ಜಿಲ್ಲೆಯ, ಮಲೆನಾಡಿನ 6 ತಾಲೂಕುಗಳಲ್ಲಿ, ಮಾದರಿ ಜೀವವೈವಿಧ್ಯ ಸಮಿತಿಗಳು, ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದು, ರಾಜ್ಯದ 6 ಸಾವಿರ ಗ್ರಾಮಗಳಲ್ಲಿ, ಸ್ಥಳೀಯ ಜೀವವೈವಿಧ್ಯ ಮಂಡಳಿಗೆ ಕಾರ್ಯಸೂಚಿ ನಿಗದಿಪಡಿಸುವಂತೆ, ಪಶ್ಚಿಮಘಟ್ಟ ಕಾರ್ಯಪಡೆಯ ನಿಕಟಪೂರ್ವ ಅಧ್ಯಕ್ಷ, ಅನಂತ ಹೆಗಡೆ ಅಶೀಸರ, ಅರಣ್ಯ ಹಾಗೂ ಪರಿಸರ ಖಾತೆ ಸಚಿವ, ಈಶ್ವರ ಖಂಡ್ರೆ ಅವರಿಗೆ, ಮನವಿ ಪತ್ರದ ಮೂಲಕ ಒತ್ತಾಯಿಸಿದ್ದಾರೆ. ಆದ್ಯತೆ ಮೇರೆಗೆ, ವಿಷಯವನ್ನು ಪರಿಗಣಿಸಿ, ಜೀವವೈವಿಧ್ಯ ದಾಖಲಾತಿಗೆ ಅವಕಾಶ ಕಲ್ಪಿಸಲು, ಕೋರಿದ್ದಾರೆ.

<><><>

ಅನಂತ ಹೆಗಡೆ ಅಶೀಸರ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ದೇಸಿ ತಳಿ ಬೀಜಗಳ ಸಂರಕ್ಷಣೆ ಮತ್ತು ಉತ್ತೇಜನ ಯೋಜನೆ ಅಡಿ, ಕಣ್ಮರೆಯಾಗುತ್ತಿರುವ ಹಾಗೂ ನಶಿಸಿ ಹೋಗುತ್ತಿರುವ, ಸ್ಥಳೀಯ ಬೆಳೆಗಳನ್ನು ಸಂಗ್ರಹಿಸಿ, ಸಂರಕ್ಷಿಸುವ ಉದ್ದೇಶದಿಂದ, ಸಮುದಾಯ ಬೀಜ ಬ್ಯಾಂಕ್ ಸ್ಥಾಪಿಸಲು, ರಾಜ್ಯ ಸರ್ಕಾರ ಯೋಜಿಸಿದೆ. ಆಯಾ ಪ್ರದೇಶದಲ್ಲಿ, ರೈತರು ತಲೆಮಾರುಗಳಿಂದ ಬೆಳೆದ, ಸಾಂಪ್ರದಾಯಿಕ ಪ್ರಭೇದಗಳು, ಸ್ಥಳೀಯ ಕೃಷಿ ಪದ್ಧತಿ ಮತ್ತು ಪ್ರದೇಶಕ್ಕೆ ಹೊಂದಿಕೊಂಡು, ವಿಶಿ ೃ ಗುಣಲಕ್ಷಣಗಳನ್ನು ಹೊಂದಿರುವ ತಳಿಗಳನ್ನು, ದೇಸಿ ತಳಿಗಳೆಂದು ಕರೆಯಲಾಗುತ್ತದೆ. ದೇಸಿ ತಳಿಗಳನ್ನು ಬೆಳೆದು ಸಂರಕ್ಷಿಸುತ್ತಿರುವ ರೈತರು, ಈ ತಿಂಗಳ 31ರ ಒಳಗೆ, ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ, ಮಾಹಿತಿ ನೀಡಲು ಕೋರಲಾಗಿದೆ.

<><><>

'ನಮ್ಮೆಲ್ಲರ ಭವಿಷ್ಯಕ್ಕಾಗಿ ಜೌಗು ನೆಲಗಳನ್ನು ಸಂರಕ್ಷಿಸೋಣ' ಎಂಬ ಧ್ಯೇಯದೊಂದಿಗೆ, ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ವಿಶ್ವ ಕಡಲಾಮೆ ದಿನ ಆಚರಿಸಲಾಯಿತು. ವಿಶ್ವದಲ್ಲಿ ಕಾಣಸಿಗುವ ಒಟ್ಟು 7 ಕಡಲಾಮೆಗಳ ಪೈಕಿ, 5 ಕಡಲಾಮೆಗಳು ಭಾರತದ ಪೂರ್ವ ಮತ್ತು ಪಶ್ಚಿಮ ಕರಾವಳಿ ತಟಗಳಲ್ಲಿ ಕಾಣ ಸಿಗುತ್ತವೆ. ಆದರೆ, ಎಲ್ಲ 7 ಬಗೆಯ ಕಡಲಾಮೆಗಳನ್ನು ಅಳಿವಿನಂಚಿನಲ್ಲಿರುವ ಅಪರೂಪದ ಉಭಯ ಜೀವಿ ಎಂದು, ಅಂತಾರಾಷ್ಟ್ರೀಯ ಪರಿಸರ ಸಂರಕ್ಷಣಾ ಸಂಘಟನೆ, ಕೆಂಪು ಪಟ್ಟಿಯಲ್ಲಿ ಪ್ರಕಟಿಸಿದೆ.

<><><>

ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಉತ್ತರಕನ್ನಡ ಜಿಲ್ಲೆ ಕಾರವಾರದ, ಕಡಲ ಜೀವಶಾಸ್ತ್ರ ಅಧ್ಯಯನ ವಿಭಾಗದ, ವಿಶ್ರಾಂತ ಹಿರಿಯ ವಿಜ್ಞಾನಿ, ಪ್ರೊಫೆಸರ್ ವಿ.ಎನ್.ನಾಯಕ.

<><><>

ಪ್ರೊಫೆಸರ್ ವಿ.ಎನ್.ನಾಯಕ ಧ್ವನಿ 50 ಸೆಕೆಂದುಗಳು

<><><>

ಇಂಜಿನಿಯರಿಂಗ್ ಸೇರಿದಂತೆ, ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ, ಸಾಮಾನ್ಯ ಪ್ರವೇಶ ಪರೀಕ್ಷೆ, ಸಿ.ಇ.ಟಿ. ಫಲಿತಾಂಶ ಇಂದು ಪ್ರಕಟವಾಗಲಿದೆ. ಕಳೆದ ಏಪ್ರಿಲ್ 16 ಹಾಗೂ 17 ರಂದು, ರಾಜ್ಯದ 775 ಪರೀಕ್ಷಾ ಕೇಂದ್ರಗಳಲ್ಲಿ, ಪರೀಕ್ಷೆ ನಡೆದಿತ್ತು. ದ್ವಿತೀಯ ಪಿಯು ಪರೀಕ್ಷೆ-1 ಮತ್ತು ಪರೀಕ್ಷೆ-2, ಸಿ.ಬಿ.ಎಸ್.ಇ, ಐ.ಸಿ.ಎಸ್.ಇ. ಫಲಿತಾಂಶಗಳು ಪ್ರಕಟವಾಗಿದ್ದು, ಅಭ್ಯರ್ಥಿಗಳು ಪಡೆದ ಅಂಕಗಳ, ಕ್ರೋಢೀಕರಣ ಕಾರ್ಯವನ್ನು, ಕೆ.ಇ.ಎ. ಪೂರ್ಣಗೊಳಿಸಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ, ದೇಶ ಬಾಂಧವರೊಂದಿಗೆ, ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 122ನೇ ಸಂಚಿಕೆಯಾಗಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಇಸ್ರೋ ಮುಖ್ಯಸ್ಥ, ವಿ.ನಾರಾಯಣನ್, ಪ್ರಸಕ್ತ 2025ನ್ನು, 'ಗಗನ ಯಾನ ವರ್ಷ'ವೆಂದು ಘೋಷಿಸಲಾಗಿದೆ ಎಂದು, ತಿಳಿಸಿದ್ದಾರೆ.

<><><>

ಕೇಂದ್ರ ಲೋಕಸೇವಾ ಆಯೋಗದ, ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆ, ನಾಳೆ 25 ರಂದು, ಧಾರವಾಡದ 26 ಪರೀಕ್ಷಾ ಕೇಂದ್ರಗಳಲ್ಲಿ, ಜರುಗಲಿವೆ.

<><><>

ಸೋಮವಾರದಿಂದ, ಜೂನ್ 2ನೇ ತಾರೀಖಿನ ವರೆಗೆ, ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆ –2 ರಾಜ್ಯಾದ್ಯಂತ ನಡೆಯಲಿದೆ.

<><><>

ಕಳೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ, ಕಳಪೆ ಸಾಧನೆ ಮಾಡಿದ, 106 ಶಾಲೆಗಳ ಮುಖ್ಯಾಧ್ಯಾಪಕರಿಗೆ, ಕಾರಣ ಕೇಳಿ ನೊಟೀಸ್ ನೀಡಲಾಗುವುದು ಎಂದು, ಧಾರವಾಡ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಭುವನೇಶ ಪಾಟೀಲ, ತಿಳಿಸಿದ್ದಾರೆ.

<><><>

ಪರಿಶಿಷ್ಟ ಜಾತಿ, ಒಳ ಮೀಸಲಾತಿ ವರ್ಗೀಕರಣ ದತ್ತಾಂಶ ಸಂಗ್ರಹಣೆಗಾಗಿ ನಡೆದಿರುವ, ಸಮೀಕ್ಷೆ ಅವಧಿಯನ್ನು, ಈ ತಿಂಗಳ 29 ರ ವರೆಗೆ ವಿಸ್ತರಿಸಲಾಗಿದೆ.

<><><>

ಕೇಂದ್ರ ಪುರಸ್ಕೃತ, 'ಭಾರತ ಸುಗಮ್ಯ ಯಾತ್ರಾ ಯೋಜನೆ' ಅಡಿ, ವಿಶ್ವ ಸುಲಭ ಗಮ್ಯತೆ ದಿನಾಚರಣೆಯನ್ನು, ಧಾರವಾಡ ಡಿಮ್ಹಾನ್ಸ್ ಆಸ್ಪತ್ರೆಯ, ಮನೋರೋಗ ವಿಭಾಗದ ಡಾಕ್ಟರ್ ಮಂಜುನಾಥ ಭಜಂತ್ರಿ, ಉದ್ಘಾಟಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಆಲಮಟ್ಟಿ ಜಲಾಶಯ; ರಾಜ್ಯ ಸರ್ಕಾರದಿಂದ, ರಾಷ್ಟ್ರೀಯ ಯೋಜನೆಯಾಗಿ, ಘೋಷಿಸುವ ಆಶಯ.
- ರಾಜ್ಯ ಇಂಧನ ಇಲಾಖೆಯ, ಹಣಕಾಸು ಸ್ಥಿತಿ ಸುಧಾರಣೆಗೆ, ಕ್ರಮ ಕೈಗೊಳ್ಳುವಂತೆ, – ಮನೋಹರ್‌ಲಾಲ್ ಖಟ್ಟರ್, ಸೂಚನೆ.
- ಸಮುದಾಯ ಬೀಜ ಬ್ಯಾಂಕ್; ರೈತರು ಹೆಸರು ನೊಂದಾಯಿಸಲು, ಈ ತಿಂಗಳ 31ರ ವರೆಗೆ, ಅವಕಾಶ.
- ಇಂಜಿನಿಯರಿಂಗ್ ಸೇರಿ, ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಾತಿ; ಸಿ.ಇ.ಟಿ. ಫಲಿತಾಂಶ, ಇಂದು ಪ್ರಕಟ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.